The detailed instructions for e-voting are provided as part of the Notice which the Members are requested to read carefully before casting vote. The Notice along with the Explanatory Statement thereto can be downloaded from the Company's website at https://www.vishnusurya.com/. The same is also available on the website of the stock exchange i.e., National Stock Exchange of India Limited ("NSE") at www.nseindia.com and on the website of Central Depository Services (India) Limited (CDSL) at www.evotingindia.com.
Members whose e-mail addresses are not registered may register the same with Cameo Corporate Services Limited, Registrar & Transfer Agent ("RTA") of the Company / DPs, as the case may be. The procedure to register e-mail address and the procedure for remote e-voting is provided in the Notice.
The Board of Directors of the Company ("the Board") have appointed M/s. BP & Associates, Company Secretaries, as Scrutinizer to scrutinize the Postal Ballot through remote e-voting process in a fair and transparent manner.
In case of any queries relating to the Postal Ballot Notice or if any eligible Member has not received the Notice, the Member may contact Ms. Sonali Sarangi, Company Secretary and Compliance Officer, at the Registered Office of the Company at the address mentioned above or write to cs@vishnusurya.com.
For any queries relating to remote e-voting, Members may refer to the Frequently Asked Questions (FAQs) and the e-voting User Manual for Shareholders available at www.evotingindia.com, or write to helpdesk.evoting@cdslindia.com.
The result of the voting by Postal Ballot will be announced within 2 (two) working days from the conclusion of e-voting period i.e., Tuesday, November 24, 2026 at 5.00 p.m. (IST). The results along with the report of Scrutinizer shall be displayed on the Company's website at https://www.vishnusurya.com/. The resolution, if passed by the requisite majority, shall be deemed to have been passed on Saturday, November 21, 2026.

BY ORDER OF THE BOARD OF DIRECTORS
FOR VISHNUSURYA PROJECTS AND INFRA LIMITED
SD/-
SONALI SARANGI
COMPANY SECRETARY AND COMPLIANCE OFFICER
M. NO: A49480

DATE: OCTOBER 23, 2026
PLACE: CHENNAI

ಕ್ರೂರವಾಗಿ ಬೀದಿನಾಯಿಯ ಹತ್ಯೆ: ಮೂವರ ಬಂಧನ

ಬೆಂಗಳೂರು: ಬೀದಿ ನಾಯಿಯನ್ನು ಮರಕ್ಕೆ ನೇತುಹಾಕಿ ಕ್ರೂರವಾಗಿ ಹಲ್ಲೆ ಮಾಡಿ ಕೊಂದಿರುವ ಆರೋಪದಡಿ ಮೂವರನ್ನು ಇಲ್ಲಿನ ವರ್ತೂರು ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಶ್ವಾನ ಪ್ರಿಯೆ ನಿಶ್ಚಿಂತ ನರೇನ್ ಎಂಬುವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಪುನೀತ್, ಮುರಳಿ ಹಾಗೂ ಮುನಿಯಪ್ಪ ಎಂಬುವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಜೂರಿನ ಗ್ರೀನ್ ವುಡ್ ಹೈಸ್ಕೂಲ್ ಬಳಿ ಇರುತ್ತಿದ್ದ ಬೀದಿನಾಯಿಯನ್ನು ಏರಿಯಾ ಸುತ್ತಮುತ್ತಲಿನ ಮುನಿಯಪ್ಪ, ಮುರಳಿ ಹಾಗೂ ಪುನೀತ್ ಎಂಬುವರು ಕ್ರೂರವಾಗಿ ಹೊಡೆದು ಸಾಯಿಸಿದ್ದಾರೆ. ಈ ಘಟನೆ ಶಾಲೆಯ ಎದುರು ನಡೆದಿದ್ದು, ಸಿಸಿಟಿವಿಯಲ್ಲಿ ಸೆರೆಯಾಗಿದೆ. ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ದೂರಿನಲ್ಲಿ ನಿಶ್ಚಿಂತ ಅವರು ದೂರು ನೀಡಿದ್ದರು. ಸಿಸಿಟಿವಿ ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡ ಪೊಲೀಸರು ಮೂವರು ಆರೋಪಿತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ.

ಕೆನರಾ ಕನ್ಸ್ಯೂಮರ್ ಪ್ರಾಡಕ್ಟ್ಸ್ ಲಿಮಿಟೆಡ್

KANARA CONSUMER PRODUCTS LIMITED

(CIN : U68100KA1962PLC001443)

ನೋಂದಾಯಿತ ಕಛೇರಿ : ಎನ್–301, 3ನೇ ಮಹಡಿ, ನಾರ್ತ್ ಬ್ಲಾಕ್, ಮಣಿಪಾಲ ಸೆಂಟರ್, 47 ಡಿಕನ್ಸನ್ ರೋಡ್, ಬೆಂಗಳೂರು – 560 042. ದೂರವಾಣಿ : 63606 92392, ಇ–ಮೇಲ್ : secretary@manipal.com

ನೋಟಿಸು

ಅಂಚೆ ಮತ ಪತ್ರ ಮತ್ತು ದೂರಸ್ಥ ಇ–ಮತದಾನದ ಸೂಚನೆ

ಕಂಪನಿಗಳ ಕಾಯಿದೆ, 2013 ("ಕಾಯಿದೆ") ರ ಸೆಕ್ಷನ್ 110 ಮತ್ತು ಸೆಕ್ಷನ್ 108 (ಹಾಗೂ ಅನ್ವಯವಾಗಬಹುದಾದ ಇತರ ನಿಬಂಧನೆಗಳು), ಮತ್ತು ಕಾಲಕಾಲಕ್ಕೆ ತಿದ್ದುಪಡಿಗೊಂಡಂತೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು") ರ ನಿಯಮ 20 ಮತ್ತು ನಿಯಮ 22 ರ ಅಡಿಯಲ್ಲಿ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ("MCA") ಹೊರಡಿಸಿರುವ ವಿವಿಧ ಸಾಮಾನ್ಯ ಸುತ್ತೋಲೆಗಳೊಂದಿಗೆ (ಅಂದರೆ, ದಿನಾಂಕ 22/09/2025 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025; ದಿನಾಂಕ 25/09/2023 ರ 09/2023; ದಿನಾಂಕ 28/12/2022 ರ 11/2022; ದಿನಾಂಕ 8 ಏಪ್ರಿಲ್, 2020 ರ 14/2020; ದಿನಾಂಕ 13 ಏಪ್ರಿಲ್, 2020 ರ 17/2020; ದಿನಾಂಕ 15 ಜೂನ್, 2020 ರ 22/2020; ದಿನಾಂಕ 28 ಸೆಪ್ಟೆಂಬರ್, 2020 ರ 33/2020; ದಿನಾಂಕ 31 ಡಿಸೆಂಬರ್, 2020 ರ 39/2020; ದಿನಾಂಕ 23 ಜೂನ್, 2021 ರ 10/2021; ದಿನಾಂಕ 8 ಡಿಸೆಂಬರ್, 2021 ರ 20/2021 ಮತ್ತು ದಿನಾಂಕ 5 ಮೇ, 2022 ರ 3/2022 – ಇವುಗಳನ್ನು ಒಟ್ಟಾಗಿ "MCA ಸುತ್ತೋಲೆಗಳು" ಎಂದು ಕರೆಯಲಾಗುತ್ತದೆ), **'ಕೆನರಾ ಕನ್ಸ್ಯೂಮರ್ ಪ್ರಾಡಕ್ಟ್ಸ್ ಲಿಮಿಟೆಡ್'** ("ಕಂಪನಿ") ನ ಸದಸ್ಯರಿಂದ, ಕೆಳಗೆ ನೀಡಲಾದ ನಿರ್ಣಯಕ್ಕೆ ಸಂಬಂಧಿಸಿದಂತೆ 'ರಿಮೋಟ್ ಇ–ವೋಟಿಂಗ್' ಪ್ರಕ್ರಿಯೆಯ ಮೂಲಕ ಅನುಮೋದನೆಯನ್ನು ಕೋರಲಾಗುತ್ತಿದೆ.

ಕ್ರ. ಸಂ.	ವಿಶೇಷ ನಿರ್ಣಯಗಳ ವಿವರಣೆ
1.	ಕಂಪನಿಯ ನೋಂದಾಯಿತ ಕಚೇರಿಯನ್ನು ಕರ್ನಾಟಕ ರಾಜ್ಯದಿಂದ ಮಹಾರಾಷ್ಟ್ರ ರಾಜ್ಯಕ್ಕೆ ಬದಲಾಯಿಸುವುದನ್ನು ಹಾಗೂ ತತ್ಪರಿಣಾಮವಾಗಿ ಸಂಘಟನಾ ಜ್ಞಾಪಕ ಪತ್ರಕ್ಕೆ ತಿದ್ದುಪಡಿ ತರುವುದನ್ನು ಅನುಮೋದಿಸಲು.

ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ:

1. ಕಂಪನಿಯು, **ಅಕ್ಟೋಬರ್ 22, 2026 ರಂದು,** ತಮ್ಮ ಇ–ಮೇಲ್ ವಿಳಾಸಗಳನ್ನು ಕಂಪನಿ ಅಥವಾ ಡೆಪಾಸಿಟರಿಗಳೊಂದಿಗೆ ನೋಂದಾಯಿಸಿಕೊಂಡಿರುವ ಸದಸ್ಯರಿಗೆ, ಇ–ಮೇಲ್ ಮೂಲಕ ಪೋಸ್ಟಲ್ ಬ್ಯಾಲೆಟ್ (ಅಂಚೆ ಮತದಾನ) ಸೂಚನೆಯನ್ನು ಕಳುಹಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ.
2. ಇ–ಮೇಲ್ ವಿಳಾಸಗಳನ್ನು ನೋಂದಾಯಿಸಿದ ಸದಸ್ಯರು ನೋಟಿಸಿನಲ್ಲಿ ಸೂಚನೆಗಳನ್ನು ನೀಡಿರುವ ಸದಸ್ಯರು ತಮ್ಮ ಸಮ್ಮತಿ ಅಥವಾ ಅಸಮ್ಮತಿಯನ್ನು ದೂರಸ್ಥ ಇ–ಮತದಾನ ವ್ಯವಸ್ಥೆಯ ಮೂಲಕವೇ ತಿಳಿಸಬೇಕಾಗುತ್ತದೆ. ರಿಮೋಟ್ ಇ–ಮತದಾನ ಸೌಲಭ್ಯವನ್ನು ಒದಗಿಸಲು ಕಂಪನಿಯು **ಪೂರ್ವಾ ಷೇರ್ ರಿಜಿಸ್ಟ್ರಿ ಇಂಡಿಯಾ ಪ್ರೈವೇಟ್ ಲಿಮಿಟೆಡ್** ನ ಸೇವೆಗಳನ್ನು ಬಳಸಿಕೊಂಡಿದೆ.
3. ಇಮೇಲ್ ವಿಳಾಸಗಳನ್ನು ನೋಂದಾಯಿಸಿಲ್ಲದ ಸದಸ್ಯರು, ವಿದ್ಯುನ್ಮಾನವಾಗಿ ಮತ ಚಲಾಯಿಸಲು ಮತ್ತು **ಕಂಪನಿ / RTA** ಮತ್ತು ಡೆಪಾಸಿಟರಿಗಳಲ್ಲಿ ತಮ್ಮ ಇ–ಮೇಲ್ ಐಡಿಯನ್ನು ನೋಂದಾಯಿಸಲು **RTA / PSRIPL** ಕಳುಹಿಸುವ ಅಂಚೆ ಮತ ಪತ್ರದ ನೋಟಿಸ್‌ನಲ್ಲಿರುವ ಟಿಪ್ಪಣಿಗಳಲ್ಲಿ ಉಲ್ಲೇಖಿಸಲಾದ ಕಾರ್ಯವಿಧಾನವನ್ನು ಓದಿಕೊಳ್ಳುವಂತೆ ವಿನಂತಿಸಲಾಗಿದೆ.
4. ರಿಮೋಟ್ ಇ–ವೋಟಿಂಗ್ (ದೂರಸ್ಥ ಇ–ಮತದಾನ) ಪ್ರಕ್ರಿಯೆಯು **2026 ರ ಅಕ್ಟೋಬರ್ 23, ಶುಕ್ರವಾರದಂದು ಬೆಳಿಗ್ಗೆ 9.00 ಗಂಟೆಗೆ (IST) ಪ್ರಾರಂಭವಾಗಿ, 2026 ರ ನವೆಂಬರ್ 21, ಶನಿವಾರದಂದು ಸಂಜೆ 5:00 ಗಂಟೆಗೆ (IST) ಕೊನೆಗೊಳ್ಳುತ್ತದೆ.** ತದನಂತರ, **ಪೂರ್ವಾ 'ಷೇರ್ ರಿಜಿಸ್ಟ್ರಿ ಇಂಡಿಯಾ ಪ್ರೈವೇಟ್ ಲಿಮಿಟೆಡ್'** ಸಂಸ್ಥೆಯು ರಿಮೋಟ್ ಇ–ವೋಟಿಂಗ್ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸುತ್ತದೆ. ಸದಸ್ಯರೊಬ್ಬರು ನಿರ್ಣಯವೊಂದರ ಮೇಲೆ ಒಮ್ಮೆ ಮತ ಚಲಾಯಿಸಿದ ನಂತರ, ಅವರು ಅದನ್ನು ಬದಲಾಯಿಸಲು ಅಥವಾ ಮತ್ತೆ ಮತ ಚಲಾಯಿಸಲು ಅವಕಾಶವಿರುವುದಿಲ್ಲ. ರಿಮೋಟ್ ಇ–ವೋಟಿಂಗ್‌ಗೆ ಸಂಬಂಧಿಸಿದ ವಿವರವಾದ ವಿಧಾನಗಳು / ಸೂಚನೆಗಳನ್ನು 'ಪೋಸ್ಟಲ್ ಬ್ಯಾಲೆಟ್' (ಅಂಚೆ ಮತಪತ್ರ) ಸೂಚನೆಯ ಟಿಪ್ಪಣಿಗಳಲ್ಲಿ ನೀಡಲಾಗಿದೆ.
5. ದೂರಸ್ಥ ಇ–ಮತದಾನದ ಮೂಲಕ ಸದಸ್ಯರು ತಮ್ಮ ಮತ ಚಲಾಯಿಸುವ ಅರ್ಹತೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಕೊನೆಯ ದಿನಾಂಕವು **ಅಕ್ಟೋಬರ್ 16, 2026 (ಕೊನೆಯ ದಿನಾಂಕ) ಆಗಿದೆ.** ಕೊನೆಯ ದಿನಾಂಕದಂದು ಸದಸ್ಯರ ರಿಜಿಸ್ಟರ್‌ನಲ್ಲಿ / ಕಂಪನಿಯ ಲಾಭದಾಯಕ ಮಾಲೀಕರ ರಿಜಿಸ್ಟರ್‌ನಲ್ಲಿ ಕಾಣಿಸಿಕೊಳ್ಳುವ ಸದಸ್ಯರು ಮಾತ್ರ ದೂರಸ್ಥ ಇ–ಮತದಾನ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ.
6. ಅಂಚೆ ಮತದಾನ ಪ್ರಕ್ರಿಯೆಯನ್ನು ನಡೆಸಲು ಪರಿಶೀಲನಕಾರರಾಗಿ **ಶ್ರೀ. ಗಗನ್ (ಸದಸ್ಯತ್ವ ಸಂಖ್ಯೆ : 70736), ಮೆ॥ ಗಗನ್ ಅಂಡ್ ಅಸೋಸಿಯೇಟ್ಸ್, ವೃತ್ತಿಪರ ಕಂಪನಿ ಕಾರ್ಯದರ್ಶಿಗಳು** ಅವರನ್ನು ಕಂಪನಿಯು ನೇಮಿಸಿದೆ.
7. ಯಾವುದೇ ಪ್ರಶ್ನೆಗಳಿದ್ದಲ್ಲಿ, ಸದಸ್ಯರು ಷೇರುದಾರರಿಗಾಗಿ ಇರುವ 'ಪದೇ ಪದೇ ಕೇಳಲಾಗುವ ಪ್ರಶ್ನೆಗಳನ್ನು' (FAQ) ಪರಿಶೀಲಿಸಬಹುದು, ಅಥವಾ **evoting@purvashare.com ಅಥವಾ secretary@manipal.com** ಗೆ ಇ–ಮೇಲ್ **ಕಳುಹಿಸಬಹುದು, ಇಲ್ಲವೇ 63606 92392 ಎಂಬ ಮೊಬೈಲ್ ಸಂಖ್ಯೆಗೆ ಕರೆ ಮಾಡಬಹುದು.**
8. ಅಂಚೆ ಮತ ಪತ್ರದ ಫಲಿತಾಂಶಗಳನ್ನು **ಕಂಪನಿಯ ಆಡಳಿತ ಮಂಡಳಿಯ ಅಧ್ಯಕ್ಷರು, ಸೋಮವಾರ, ನವೆಂಬರ್ 23, 2026 ರಂದು** ಅಥವಾ ಅದಕ್ಕೂ ಮೊದಲು ಘೋಷಿಸುವರು.

ಆಡಳಿತ ಮಂಡಳಿಗಾಗಿ ಮತ್ತು ಪರವಾಗಿ
ಕೆನರಾ ಕನ್ಸ್ಯೂಮರ್ ಪ್ರಾಡಕ್ಟ್ಸ್ ಲಿಮಿಟೆಡ್.

ದಿನಾಂಕ : 23–10–2026
ಸ್ಥಳ : ಬೆಂಗಳೂರು.

ಸಹಿ/– ಸುಶೀಲಾ,
ಕಂಪನಿ ಕಾರ್ಯದರ್ಶಿ.

ಕ್ರೆಡಿಟ್‌ಆ್ಯಕ್ಸೆಸ್ ಗ್ರಾಮೀಣ್ ಲಿಮಿಟೆಡ್

CreditAccess® Grameen

ನೋಂದಾಯಿತ & ಕಾರ್ಪೊರೇಟ್ ಕಛೇರಿ: ಸಂ.49, 46ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, (ರಾಜಲಕ್ಷ್ಮಿ ಕಲ್ಯಾಣಮಂಟಪದ ಪಕ್ಕ) ಬೆಂಗಳೂರು – 560070, ಕರ್ನಾಟಕ, ಭಾರತ
ವೆಬ್‌ಸೈಟ್: www.creditaccessgrameen.in
ಸಿಐಎನ್: L51216KA1991PLC053425

ಸೆಪ್ಟೆಂಬರ್ 30, 2026 ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧ ವರ್ಷದ ಅಪರಿಶೋಧಿತ ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಕೋಟಿ ರೂಗಳಲ್ಲಿ)

ಕ್ರ. ಸಂ.	ವಿವರಗಳು	30–09–2026 ಕ್ಕೆ ಕೊನೆಯಾದ ತ್ರೈಮಾಸಿಕ (ಅಪರಿಶೋಧಿತ)	30–09–2026 ಅರ್ಧ ವರ್ಷಕ್ಕೆ ಕೊನೆಯಾದ (ಅಪರಿಶೋಧಿತ)	30–09–2025 ಕ್ಕೆ ಕೊನೆಯಾದ ತ್ರೈಮಾಸಿಕ (ಅಪರಿಶೋಧಿತ)	31–03–2026 ಕ್ಕೆ ಕೊನೆಯಾದ ವರ್ಷ (ಪರಿಶೋಧಿತ)
1	ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ	1,904.80	3,689.23	1,509.02	6,062.54
2	ಸದರಿ ಅವಧಿಗೆ ನಿವ್ವಳ ಲಾಭ (ತೆರಿಗೆ, ಅಸಾಧಾರಣ ಮತ್ತು/ಯಾ ಅಸಾಮಾನ್ಯ ಐಟಂಗಳನ್ನು ಕಳೆಯುವ ಮುನ್ನ)	670.95	1,331.03	169.16	1,033.20
3	ಸದರಿ ಅವಧಿಗೆ ನಿವ್ವಳ ಲಾಭ – ಅಸಾಧಾರಣ ಮತ್ತು/ಯಾ ಅಸಾಮಾನ್ಯ ಐಟಂಗಳನ್ನು ಕಳೆದು	670.95	1,331.03	169.16	1,033.20
4	ಸದರಿ ಅವಧಿಗೆ ತೆರಿಗೆ, ಅಸಾಧಾರಣ ಮತ್ತು/ಯಾ ಅಸಾಮಾನ್ಯ ಐಟಂಗಳನ್ನು ಕಳೆದ ನಂತರ ನಿವ್ವಳ ಲಾಭ	501.57	995.00	125.81	777.64
5	ಸದರಿ ಅವಧಿಗೆ ಒಟ್ಟು ಸಮಗ್ರ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು) ಸೇರಿದಂತೆ]	543.95	1,037.10	128.41	828.77
6	ಪೇಯ್ಡಪ್ ಇಕ್ವಿಟಿ ಷೇರು ಬಂಡವಾಳ	160.52	160.52	159.88	160.20
7	ಮೀಸಲುಗಳು–ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು	6,165.71	6,165.71	4,470.49	5,121.00
8	ಸೆಕ್ಯುರಿಟಿಸ್ ಪ್ರೀಮಿಯಮ್ ಖಾತೆ	2,592.78	2,592.78	2,534.01	2,561.05
9	ನಿವ್ವಳ ಮೌಲ್ಯ	8,919.01	8,919.01	7,164.38	7,842.25
10	ಬಾಕಿ ಇರುವ ರಿಡೀಮಬಲ್ ಪ್ರಿಫರೆನ್ಸ್ ಷೇರುಗಳು	Nil	Nil	Nil	Nil
11	ಡೆಟ್ ಇಕ್ವಿಟಿ ಅನುಪಾತ	2.82	2.82	2.81	3.01
12	ಪೇಯ್ಡಪ್ ಋಣ ಬಂಡವಾಳ/ಬಾಕಿ ಇರುವ ಋಣ	25,128.44	25,128.44	20,103.16	23,641.13
13	ತಲಾ ಷೇರಿಗೆ ಗಳಿಕೆ (ತಲಾ ಷೇರಿನ ಮುಖ ಬೆಲೆ 10 ರೂ.) (ನಡೆಯುತ್ತಿರುವ ಮತ್ತು ನಿಲ್ಲಿಸಿರುವ ಕಾರ್ಯಾಚರಣೆಗಳಿಗೆ)– ವಾರ್ಷಿಕೀಕರಿಸಿಲ್ಲ				
	– ಬೇಸಿಕ್ (ರೂ)	31.27	62.07	7.87	48.63
	– ಡೈಲ್ಯೂಟೆಡ್ (ರೂ)	31.12	61.79	7.83	48.44
14	ಬಂಡವಾಳ ವಿಮೋಚನಾ ಮೀಸಲು	Nil	Nil	Nil	Nil
15	ಡಿಬೆಂಚರ್ ವಿಮೋಚನಾ ಮೀಸಲು	Nil	Nil	Nil	Nil
16	ಸಾಲ ತೀರಿಕೆ ಕವರೇಜ್ ಅನುಪಾತ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ
17	ಬಡ್ಡಿ ತೀರಿಕೆ ಕವರೇಜ್ ಅನುಪಾತ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ

ಟಿಪ್ಪಣಿಗಳು:

1. ಮೇಲಿನ ಹಣಕಾಸಿನ ಫಲಿತಾಂಶಗಳನ್ನು ಲೆಕ್ಕಪರಿಶೋಧನಾ ಸಮಿತಿ ಹಾಗೂ ನಿರ್ದೇಶಕರ ಮಂಡಳಿ ಅಕ್ಟೋಬರ್ 28, 2025 ರಂದು ನಡೆದ ತಮ್ಮ ಸಭೆಯಲ್ಲಿ ಪರಿಶೀಲಿಸಿ ಅನುಮೋದಿಸಿದೆ. ಜಂಟಿ ಶಾಸನಬದ್ಧ ಲೆಕ್ಕಪರಿಶೋಧಕರು ಅಕ್ಟೋಬರ್ 22, 2026 ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧ ವರ್ಷದ ಅಪರಿಶೋಧಿತ ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಸಾರಾಂಶ ಹೇಳಿಕೆಯ ಬಗ್ಗೆ unmodified opinion ವ್ಯಕ್ತಪಡಿಸಿದ್ದಾರೆ.
2. (ಎ) ಪ್ರತ್ಯೇಕವಾಗಿ ತೆಗೆದುಕೊಂಡಾಗ ಅನುಕ್ರಮವಾಗಿ ತ್ರೈಮಾಸಿಕಕ್ಕೆ ಮತ್ತು ವರ್ಷಕ್ಕೆ ಕಾರ್ಯಾಚರಣೆಗಳಿಂದ ಬಂದಿರುವ ಒಟ್ಟು ಆದಾಯ: 1904.8/– ಕೋಟಿ ರೂ. ಮತ್ತು 3689.23/– ಕೋಟಿ ರೂ.; (ಬಿ) ತೆರಿಗೆಗೆ ಮುನ್ನ ನಿವ್ವಳ ಲಾಭ: 670.95/– ಕೋಟಿ ರೂ. ಮತ್ತು 1331.03/– ಕೋಟಿ ರೂ; ಮತ್ತು (ಸಿ) ತೆರಿಗೆಯ ನಂತರದ ನಿವ್ವಳ ಲಾಭ: 501.57/– ಕೋಟಿ ರೂ. ಮತ್ತು 995.00/– ಕೋಟಿ ರೂ.
3. ಮೇಲೆ ನೀಡಿರುವುದು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ನಿಬಂಧನೆಗಳು, 2015 ರ ನಿಬಂಧನೆ 33 ಹಾಗೂ ನಿಬಂಧನೆ 52 ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿರುವ ತ್ರೈಮಾಸಿಕದ ಮತ್ತು ವಾರ್ಷಿಕ ಆರ್ಥಿಕ ಫಲಿತಾಂಶಗಳ ವಿಸ್ತೃತ ರೂಪದ ಸಾರಾಂಶವಾಗಿರುತ್ತದೆ. ಈ ತ್ರೈಮಾಸಿಕದ ಮತ್ತು ವಾರ್ಷಿಕ ಆರ್ಥಿಕ ಫಲಿತಾಂಶಗಳು ಕಂಪನಿಯ ಷೇರುಗಳು ಲಿಸ್ಟ್ ಆಗಿರುವ ಸ್ಟಾಕ್ ಎಕ್ಸ್‌ಚೇಂಜುಗಳಾದ ನ್ಯಾಷನಲ್ ಎಕ್ಸ್‌ಚೇಂಜಿನ www.nseindia.com/corporates ವೆಬ್‌ಸೈಟ್‌ನಲ್ಲಿಯೂ ಮತ್ತು ಬಿಎಸ್‌ಇ ಲಿಮಿಟೆಡ್ ನ www.bseindia.com/corporates ವೆಬ್‌ಸೈಟ್‌ನಲ್ಲಿಯೂ ಮತ್ತು ಕಂಪನಿಯ www.creditaccessgrameen.in ವೆಬ್‌ಸೈಟಿನಲ್ಲಿಯೂ ಲಭ್ಯವಿರುತ್ತವೆ.
4. ತಿದ್ದುಪಡಿಮಾಡಿದ ಲಿಸ್ಟಿಂಗ್ ನಿಬಂಧನೆಗಳ ನಿಬಂಧನೆ 52(4) ರಲ್ಲಿ ಹೇಳಿರುವಂತಹ ಇತರ ಲೈನ್ ಐಟಂಗಳ ಬಗ್ಗೆ ಸ್ಟಾಕ್ ಎಕ್ಸ್‌ಚೇಂಜ್‌ಗೆ(ಗಳಿಗೆ) ಸಮಂಜಸವಾಗಿ ತಿಳಿಸಲಾಗಿದ್ದು ಅದನ್ನು ಮೇಲೆ (3) ರಲ್ಲಿ ಹೇಳಿರುವಂತಹ ವೆಬ್‌ಸೈಟ್ ಲಿಂಕ್ ಮೂಲಕ ನೋಡಬಹುದಾಗಿರುತ್ತದೆ.

ದಿನಾಂಕ: ಅಕ್ಟೋಬರ್ 22, 2026
ಸ್ಥಳ: ಬೆಂಗಳೂರು

ಕ್ರೆಡಿಟ್‌ಆ್ಯಕ್ಸೆಸ್ ಗ್ರಾಮೀಣ್ ಲಿಮಿಟೆಡ್ ಮಂಡಳಿಗಾಗಿ ಮತ್ತು ಪರವಾಗಿ
ಸಹಿ/–
ಗಣೇಶ್ ನಾರಾಯಣನ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಒ

ಸೆಪ್ಟೆಂಬರ್ 30, 2026 ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧ ವರ್ಷದ ಹಣಕಾಸು ಫಲಿತಾಂಶಗಳ ಸಾರಾಂಶವನ್ನು ನೋಡಲು ಈ QR ಕೋಡ್ ಅನ್ನು ಸ್ಕ್ಯಾನ್ ಮಾಡಿ

ಜಾತಿ ಕಾರಣಕ್ಕೆ ಮುರಿದು ಬಿದ್ದ ವಿವಾಹ, ವಂಚನೆ ಆಗಲ್ಲ। ವೈದ್ಯನ ವಿರುದ್ಧದ ಪ್ರಕರಣ ರದ್ದು

ಒಪ್ಪಿತ ದೈಹಿಕ ಸಂಬಂಧ ದೌರ್ಜನ್ಯ ಆಗದು: ಹೈಕೋರ್ಟ್

ಬೆಂಗಳೂರು: ಮದುವೆಯಾಗುವುದಾಗಿ ನಂಬಿಸಿ ದೀರ್ಘಕಾಲದವರೆಗೆ ದೈಹಿಕ ಸಂಬಂಧ ಬೆಳೆಸಿ, ಬಳಿಕ ಮದುವೆಗೆ ನಿರಾಕರಿಸಿದರೆ ಅದನ್ನು 'ಮದುವೆಯ ಸುಳ್ಳು ಭರವಸೆ' ನೀಡಿ ಮಾಡಿದ ವಂಚನೆ ಎಂದು ಪರಿಗಣಿಸಲಾಗುವುದಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ. ಮಂಗಳೂರಿನಲ್ಲಿ ದಾಖಲಾಗಿದ್ದ ಪ್ರಕರಣ ರದ್ದುಪಡಿಸುವಂತೆ ಕೋರಿ ಬೀದರ್ ಮೂಲದ ವೈದ್ಯ ಡಾ.ರಾಮದಾಸ್ ಅಲಿಯಾಸ್ ರಾಮದಾಸ್ ಪಾಟೀಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ ಈ ಆದೇಶ ನೀಡಿದೆ.

ಇಬ್ಬರೂ ವಯಸ್ಕರಾಗಿದ್ದು, ಸುಮಾರು 7 ವರ್ಷಗಳ ಕಾಲ ಪರಸ್ಪರ ಒಪ್ಪಿಗೆಯಿಂದ ಒಡನಾಟ ಹೊಂದಿದ್ದರು. ಕೇವಲ ಮದುವೆ ಮುರಿದುಬಿದ್ದ ಮಾತ್ರಕ್ಕೆ ಅದನ್ನು ಆರಂಭದಿಂದಲೂ ವಂಚಿಸುವ ದುರುದ್ದೇಶವಿತ್ತು ಎಂದು ಹೇಳಲಾಗುವುದಿಲ್ಲ. ಸುಪ್ರೀಂಕೋರ್ಟ್‌ನ ಹಲವು ತೀರ್ಪುಗಳನ್ನು ಉಲ್ಲೇಖಿಸಿರುವ ಪೀಠ, ದೀರ್ಘಕಾಲದ ಪರಸ್ಪರ ಒಪ್ಪಿಗೆಯ ಸಂಬಂಧಗಳು ಕಹಿ ಅಂತ್ಯ ಕಂಡಾಗ ಸೆಕ್ಷನ್ 69 ಅನ್ನು ಅಸ್ತ್ರವನ್ನಾಗಿ ಬಳಸುವ ಪ್ರವೃತ್ತಿ ಹೆಚ್ಚಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದೆ.

ಸುಪ್ರೀಂಕೋರ್ಟ್‌ನ ಹಳೆಯ ತೀರ್ಪುಗಳನ್ನು ಉಲ್ಲೇಖಿಸಿರುವ ನ್ಯಾಯಪೀಠ, ಮದುವೆಯ ಭರವಸೆ ನೀಡುವ ಆರಂಭದ ದಿನದಲ್ಲೇ ಅದನ್ನು ಈಡೇರಿಸುವ ಯಾವುದೇ ಉದ್ದೇಶ ಇರದೇ ವಂಚಿಸಿದ್ದರೆ ಮಾತ್ರ ಅದು ಅಪರಾಧವಾಗುತ್ತದೆ. ಪ್ರೀತಿಯ ಸಂಬಂಧವು ನಂತರದ ದಿನಗಳಲ್ಲಿ ಜಾತಿ ತಾರತಮ್ಯದಂತಹ ಕಾರಣಗಳಿಂದ ಮುರಿದುಬಿದ್ದರೆ ಅದನ್ನು ವಂಚನೆ ಎನ್ನಲಾಗದು ಎಂದು ಸ್ಪಷ್ಟಪಡಿಸಿದೆ.

ಅಲ್ಲದೆ, ದೂರಿನಲ್ಲಿ ಯಾವುದೇ ದೈಹಿಕ ಹಲ್ಲೆ ಅಥವಾ ಜಾತಿ ನಿಂದನೆಗೆ ಸಂಬಂಧಿಸಿದಂತೆ ಸೂಕ್ತ ಸಾಕ್ಷ್ಯಗಳಿಲ್ಲದಿರುವುದರಿಂದ ಮತ್ತು ಇಡೀ ಸಂಬಂಧವು ಪರಸ್ಪರ ಒಪ್ಪಿಗೆಯಿಂದ ಕೂಡಿದ್ದರಿಂದ ಈ ಪ್ರಕರಣದಲ್ಲಿ ಜಾತಿ ದೌರ್ಜನ್ಯ ಕಾಯಿದೆ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗುವುದಿಲ್ಲ. ಈ ಹಿನ್ನೆಲೆಯಲ್ಲಿ, ಅರ್ಜಿದಾರರ ವಿರುದ್ಧ ಮಂಗಳೂರಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣವನ್ನು ಪೀಠವು ರದ್ದುಗೊಳಿಸಿ ಆದೇಶಿಸಿದೆ.

ಏನಿದು ಪ್ರಕರಣ:?

- ಓದುವ ವೇಳೆ ಮಂಗಳೂರಿನಲ್ಲಿ ಇಬ್ಬರಿಗೆ ಪರಿಚಯ
- ವೈದ್ಯಕೀಯ ಕಾಲೇಜಲ್ಲಿ ಯುವಕ–ಯುವತಿಗೆ ಪ್ರೇಮ
- 7 ವರ್ಷಗಳ ಕಾಲ ಪರಸ್ಪರ ಒಪ್ಪಿಗೆಯಿಂದ ಒಡನಾಟ
- ಯುವತಿ ಪರಿಶಿಷ್ಟ ಜಾತಿ ಎಂಬ ಕಾರಣಕ್ಕೆ ಇಬ್ಬರಲ್ಲಿ ಭಿನ್ನಾಭಿಪ್ರಾಯ
- ಆರೋಪಿ ಬೇರೆ ಯುವತಿಯನ್ನು ಮದುವೆಯಾಗಲು ನಿರ್ಧಾರ
- ಅಸಮಾಧಾನಗೊಂಡ ಯುವತಿ ಯುವಕನ ವಿರುದ್ಧ ವಂಚನೆ ದೂರು
- ವಿಚಾರಣೆ ನಡೆಸಿದ ಹೈಕೋರ್ಟ್ ಒಪ್ಪಿತ ಸಂಬಂಧ ವಂಚನೆ ಆಗದು ಎಂದು ತೀರ್ಪು

ಪ್ರಕರಣದ ಹಿನ್ನೆಲೆ: ಅರ್ಜಿದಾರರು ಮತ್ತು ದೂರುದಾರರು ವೈದ್ಯರಾಗಿದ್ದು ಮಂಗಳೂರಿನ ಬೇರೆ ಬೇರೆ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು. ಆರೋಪಿತರಾದ ಅರ್ಜಿದಾರರಿಗೆ 2017ರಲ್ಲಿ ಬೀದರ್‌ನಲ್ಲಿ ಸ್ನೇಹಿತರಿಂದ ದೂರುದಾರರ ಪರಿಚಯವಾಗಿತ್ತು. ಅಲ್ಲಿಂದ ಇಬ್ಬರ ನಡುವೆ ಸ್ನೇಹ ಬೆಳೆದು ಬಳಿಕ ಅದು ಪ್ರೇಮ ಸಂಬಂಧವಾಗಿ 2019ರವರೆಗೂ ಮುಂದುವರಿದಿತ್ತು. 2017ರಿಂದ 2023ರವರೆಗೂ ಇಬ್ಬರ ನಡುವೆ ದೈಹಿಕ ಸಂಬಂಧವೂ ಇತ್ತು. ಆದರೆ, ದೂರುದಾರೆ ಪರಿಶಿಷ್ಟ ಜಾತಿಗೆ ಸೇರಿದವರು ಎಂಬ ಕಾರಣದಿಂದ ಇಬ್ಬರ ನಡುವೆ ಭಿನ್ನಾಭಿಪ್ರಾಯ ಉಂಟಾಗಿತ್ತು. ಅಲ್ಲದೆ, ಆರೋಪಿ ಬೇರೆ ಯುವತಿಯನ್ನು ಮದುವೆಯಾಗಲು ನಿರ್ಧರಿಸಿದ್ದರು. ಇದರಿಂದ ಅಸಮಾಧಾನಗೊಂಡ ಸಂತ್ರಸ್ತೆ 2025ರಲ್ಲಿ ಮಂಗಳೂರಿನ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪೊಲೀಸರು ತನಿಖೆ ನಡೆಸಿ ಅರ್ಜಿದಾರರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ನಿರ್ಮಾಣ ಹಂತದ ಕಟ್ಟಡದ 5ನೇ ಮಹಡಿಯಲ್ಲಿ ಬ್ಯಾಟರಿ ರೀತಿಯ ವಸ್ತು ಸ್ಫೋಟ

ಶಂಕಾಸ್ಪದ ಸ್ಫೋಟ: ಎನ್‌ಐಎ ತನಿಖೆ ಚುರುಕು

ಬೆಂಗಳೂರು: ನಗರದಲ್ಲಿ ನಿರ್ಮಾಣ ಹಂತದ ಕಟ್ಟಡದಲ್ಲಿ ಶಂಕಾಸ್ಪದ ಬ್ಯಾಟರಿ ರೀತಿಯ ವಸ್ತುವೊಂದು ಸ್ಫೋಟಗೊಂಡು ಇಬ್ಬರು ಗಾಯಗೊಂಡ ಪ್ರಕರಣ ಸಂಬಂಧ ರಾಜ್ಯ ಹಾಗೂ ಕೇಂದ್ರ ತನಿಖಾ ಸಂಸ್ಥೆಗಳಿಂದ ತನಿಖೆ ಚುರುಕುಗೊಂಡಿದೆ.

ಮಂಗಳವಾರ ಮಧ್ಯಾಹ್ನ ಪುಲಕೇಶಿನಗರದ ಜರ್ಮಿಯಾ ರಸ್ತೆಯಲ್ಲಿರುವ ನಿರ್ಮಾಣ ಹಂತದ ಕಟ್ಟಡದ 5ನೇ ಮಹಡಿಯಲ್ಲಿ ಬ್ಯಾಟರಿ ರೀತಿಯ ವಸ್ತುವೊಂದು ಸ್ಫೋಟಗೊಂಡಿತ್ತು. ಘಟನೆಯಲ್ಲಿ ಕಟ್ಟಡದ ಕಾವಲುಗಾರನಾಗಿದ್ದ ಅಲ್ಲಾವುದ್ದೀನ್, ಪೇಂಟರ್ ಆಗಿದ್ದ ಸೂರಜ್ ಕುಮಾರ್ ಗಂಭೀರ ಗಾಯಗೊಂಡಿದ್ದರು. ಗಾಯಾಳುಗಳ ಹೇಳಿಕೆ ಆಧರಿಸಿ ಪುಲಕೇಶಿನಗರ ಪೊಲೀಸರು ಸ್ಥಳಕ್ಕೆ ಧಾವಿಸಿ ವೈಯರ್, ಟೈಮರ್ ಹಾಗೂ ಬ್ಯಾಟರಿಗಳನ್ನು ವಶಕ್ಕೆ ಪಡೆದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದರು.



ಸ್ಫೋಟಗೊಂಡಿರುವ ವಸ್ತುಗಳು ಸುಧಾರಿತ ಸ್ಫೋಟಕ ಬಾಂಬ್ ಆಗಿರುವ ಬಗ್ಗೆ ಪ್ರಬಲ ಶಂಕೆ ವ್ಯಕ್ತವಾಗಿದೆ. ಅಧಿಕೃತವಾಗಿ ವರದಿ ಬಂದ ಬಳಿಕ ಈ ಬಗ್ಗೆ ತಿಳಿಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಎನ್‌ಐಎ ಅಧಿಕಾರಿಗಳು ದೌಡು: ಸ್ಫೋಟ ಸಂಬಂಧ ಎನ್‌ಐಎ ಅಧಿಕಾರಿಗಳು ಸ್ಥಳಕ್ಕೆ ದೌಡಾಯಿಸಿ ಪರಿಶೀಲಿಸಿದ್ದಾರೆ. ಪೂರ್ವ ವಿಭಾಗದ ಪೊಲೀಸರಿಂದ ಪ್ರಾಥಮಿಕ ಮಾಹಿತಿಗಳನ್ನು ಕಲೆ ಹಾಕಿದ್ದಾರೆ. ಆಕಸ್ಮಿಕವಾಗಿ ಸಂಭವಿಸಿದೆಯಾ ಅಥವಾ ವಿಧ್ವಂಸಕ ಕೃತ್ಯ ವೆಸಗಲು ತಯಾರಿ ನಡೆಸಲಾಗಿತ್ತೆ ಎಂಬ ಆಯಾಮದಲ್ಲಿ ಎನ್‌ಐಎ ತಂಡ ತನಿಖೆ ನಡೆಸುತ್ತಿದೆ. ಮತ್ತೊಂದೆಡೆ, ಕಟ್ಟಡದಲ್ಲಿದ್ದ ಕಾವಲುಗಾರ ಅಲ್ಲಾವುದ್ದೀನ್ ಮತ್ತು ಪೇಂಟರ್ ಸೂರಜ್ ಕುಮಾರ್ ಹೇಳಿಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಏನಿದು ಪ್ರಕರಣ?

ರಾಮಮೂರ್ತಿನಗರದ ಉದ್ಯಮಿಯೊಬ್ಬರು ಪುಲಕೇಶಿನಗರದಲ್ಲಿ 7 ಅಂತಸ್ತಿನ ಕಟ್ಟಡದ ಮಾಲೀಕರಾಗಿದ್ದಾರೆ. ಮೊದಲ ಎರಡು ಮಹಡಿಗಳಲ್ಲಿ ವಾಣಿಜ್ಯ ಮಳಿಗೆಗಳಿವೆ. ಇನ್ನುಳಿದ ಮಹಡಿಗಳಲ್ಲಿ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಮಂಗಳವಾರ (ಅ.20) ಮಧ್ಯಾಹ್ನ 1:30ರ ಸುಮಾರಿಗೆ ಕಾರ್ಯನಿರತರಾಗಿದ್ದ ಅಲ್ಲಾವುದ್ದೀನ್‌ಗೆ ಅನಾಮಧೇಯ ವ್ಯಕ್ತಿ ಕರೆ ಮಾಡಿ ಪಾರ್ಸೆಲ್ ಕಳುಹಿಸಿರುವುದಾಗಿ ತಿಳಿಸಿದ್ದ. ಬ್ಯಾಟರಿ ಮಾದರಿ ಪಾರ್ಸೆಲ್ ಸ್ವೀಕರಿಸಿದ ಕಾವಲುಗಾರ ಅಲ್ಲಾವುದ್ದೀನ್, 7ನೇ ಮಹಡಿಯಲ್ಲಿದ್ದ ಸೂರಜ್‌ನನ್ನು 5ನೇ ಮಹಡಿಗೆ ಕರೆಯಿಸಿಕೊಂಡು ತೆಗೆಯುವಂತೆ ಸೂಚಿಸಿದ್ದರು. ಪಾರ್ಸೆಲ್ ತೆರೆದು ಸ್ವಿಚ್ ಆನ್ ಮಾಡುತ್ತಿದ್ದಂತೆ ಸ್ಫೋಟಗೊಂಡಿದೆ. ಘಟನೆಯಲ್ಲಿ ಸೂರಜ್ ಬಾಯಿ ಮತ್ತು ಕೈಗೆ ಗಾಯಗಳಾದರೆ, ಅಲ್ಲಾವುದ್ದೀನ್ ಅವರಿಗೆ ಕೈ ಸೇರಿದಂತೆ ಇತರೆ ಭಾಗಗಳಿಗೆ ಸುಟ್ಟ ಗಾಯವಾಗಿತ್ತು. ಗಾಯಾಳುಗಳನ್ನು ಸ್ಥಳೀಯರ ನೆರವಿನಿಂದ ಬೌರಿಂಗ್ ಆಸ್ಪತ್ರೆಗೆ ರವಾನಿಸಲಾಗಿತ್ತು. ಮಾಹಿತಿ ಆಧರಿಸಿ ಸ್ಥಳಕ್ಕೆ ತೆರಳಿ, ಅಲ್ಲಿ ದೊರಕಿದ್ದ ಟೈಮರ್, ವೈಯರ್ ಹಾಗೂ ಬ್ಯಾಟರಿಗಳನ್ನು ವಶಕ್ಕೆ ಪಡೆದು ಎಫ್ಎಸ್‌ಎಲ್‌ಗೆ ಕಳುಹಿಸಲಾಗಿದೆ.

ಇಂಡಿಕ್ಯೂಬ್ ಸ್ಪೇಸಸ್ ಲಿಮಿಟೆಡ್

INDIQUBE® GROW YOUR BUSINESS

(ಹಿಂದೆ 'ಇಂಡಿಕ್ಯೂಬ್ ಸ್ಪೇಸಸ್ ಪ್ರೈವೇಟ್ ಲಿಮಿಟೆಡ್, ಇನ್ನೋವೆಂಟ್ ಸ್ಪೇಸಸ್ ಪ್ರೈವೇಟ್ ಲಿಮಿಟೆಡ್' ಎಂದು ಕರೆಯಲಾಗುತ್ತಿತ್ತು)

ಸಿಐಎನ್: L45400KA2015PLC133523
ನೋಂದಾಯಿತ ಕಛೇರಿ: ಪ್ಲಾಟ್ # 53, ಕೇರಿಯರ್‌ನೆಟ್ ಕ್ಯಾಂಪಸ್, ಕರಿಯಮ್ಮನ ಅಗ್ರಹಾರ ರಸ್ತೆ, ದೇವರಬೀಸನಹಳ್ಳಿ, ಔಟರ್ ರಿಂಗ್ ರಸ್ತೆ, ಬೆಂಗಳೂರು 560103, ಕರ್ನಾಟಕ, ಭಾರತ
ದೂರವಾಣಿ: +91 99000 92210, **ಇಮೇಲ್:** cs.compliance@indiqube.com, **ವೆಬ್‌ಸೈಟ್:** www.indiqube.com

ಪೋಸ್ಟಲ್ ಬ್ಯಾಲೆಟ್ ಸೂಚನೆ

ಈ ಮೂಲಕ **ಸೂಚನೆ** ನೀಡಲಾಗುವುದೇನೆಂದರೆ, ಕಂಪನಿಗಳ ಕಾಯ್ದೆ, 2013ರ (ಇನ್ನು ಮುಂದೆ 'ಕಾಯ್ದೆ' ಎಂದು ಕರೆಯಲಾಗುತ್ತದೆ) ಕಲಂಗಳು 108 ಮತ್ತು 110 ಹಾಗೂ ಅನ್ವಯವಾಗುವ ಇತರೆ ನಿಬಂಧನೆಗಳು (ಯಾವುದಾದರೂ ಇದ್ದಲ್ಲಿ), ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ **("ನಿಯಮಗಳು")** ನಿಯಮಗಳು 20 ಮತ್ತು 22, ಹಾಗೂ ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕಾಯ್ದೆಯ ಇತರೆ ಅನ್ವಯವಾಗುವ ನಿಬಂಧನೆಗಳು ಮತ್ತು ಅದರಡಿಯ ನಿಯಮಗಳು, ಸುತ್ತೋಲೆಗಳು ಹಾಗೂ ಅಧಿಸೂಚನೆಗಳು (ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಮರುಅಧಿನಿಯಮನಗಳು ಸೇರಿದಂತೆ); ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು **("ಎಂಸಿಎ")** ಹೊರಡಿಸಿರುವ ಏಪ್ರಿಲ್ 8, 2020ರ ಸಾಮಾನ್ಯ ಸುತ್ತೋಲೆ ಸಂ. 14/2020, ಏಪ್ರಿಲ್ 13, 2020ರ ಸಾಮಾನ್ಯ ಸುತ್ತೋಲೆ ಸಂ. 17/2020, ಸೆಪ್ಟೆಂಬರ್ 22, 2025ರ ಸಾಮಾನ್ಯ ಸುತ್ತೋಲೆ ಸಂ. 03/2025 ಮತ್ತು ಸಂಬಂಧಿತ ಇತರೆ ಸುತ್ತೋಲೆಗಳು (ಯಾವುದಾದರೂ ಇದ್ದಲ್ಲಿ) (ಇವೆಲ್ಲವನ್ನೂ ಒಟ್ಟಾಗಿ **"ಎಂಸಿಎ ಸುತ್ತೋಲೆಗಳು"** ಎಂದು ಕರೆಯಲಾಗುತ್ತದೆ); ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿರುವ ಸಾಮಾನ್ಯ ಸಭೆಗಳ ಕುರಿತ ಕಾರ್ಯದರ್ಶಿ ಮಾನದಂಡ; ತಿದ್ದುಪಡಿ ಮಾಡಲಾದ ಭಾರತೀಯ ಪ್ರತಿಭೂತಿ ಮತ್ತು ವಿನಿಮಯ ಮಂಡಳಿ (ಪಟ್ಟೀಕರಣ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಾವಳಿ, 2015ರ **("ಸೆಬಿ ಪಟ್ಟೀಕರಣ ನಿಯಮಾವಳಿ")** ನಿಯಮ 44; ಹಾಗೂ ಅನ್ವಯವಾಗುವ ಇತರೆ ಕಾನೂನುಗಳು, ನಿಯಮಗಳು ಮತ್ತು ನಿಯಮಾವಳಿಗಳಿಗೆ (ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಮರುಅಧಿನಿಯಮನಗಳು ಸೇರಿದಂತೆ) ಅನುಸಾರವಾಗಿ, ಇಂಡಿಕ್ಯೂಬ್ ಸ್ಪೇಸಸ್ ಲಿಮಿಟೆಡ್‌ನ (ಇನ್ನು ಮುಂದೆ **"ಕಂಪನಿ"** ಎಂದು ಕರೆಯಲಾಗುತ್ತದೆ) ಸದಸ್ಯರ ಅನುಮೋದನೆಯನ್ನು ಈ ಕೆಳಗಿನ ನಿರ್ಣಯಕ್ಕಾಗಿ ಪೋಸ್ಟಲ್ ಬ್ಯಾಲೆಟ್ ಮೂಲಕ, ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯನ್ನು ಮಾತ್ರ ಬಳಸಿ ಕೋರಲಾಗುತ್ತಿದೆ:

ಕ್ರ. ಸಂ.	ನಿರ್ಣಯದ ವಿವರ	ನಿರ್ಣಯದ ವಿಧ
1	ಶ್ರೀ ಈಶ್ವರ್ ಸುಬ್ರಮಣಿಯನ್ (ಡಿಐಎನ್: 01473535) ಅವರನ್ನು ಕಂಪನಿಯ ಸ್ವತಂತ್ರ ನಿರ್ದೇಶಕರಾಗಿ ನೇಮಿಸುವುದು	ವಿಶೇಷ ನಿರ್ಣಯ

ಸದಸ್ಯರಿಗೆ ಈ ಕೆಳಗಿನಂತೆ ತಿಳಿಸಲಾಗುತ್ತದೆ:

1. ಎಂಸಿಎ ಸುತ್ತೋಲೆಗಳಿಗೆ ಅನುಸಾರವಾಗಿ, ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆ ಮತ್ತು ವಿಧಾನ ಸೇರಿದಂತೆ ಇತರೆ ವಿವರಗಳನ್ನು ಒಳಗೊಂಡಿರುವ ಈ ಪೋಸ್ಟಲ್ ಬ್ಯಾಲೆಟ್ ಸೂಚನೆಯನ್ನು **("ಸೂಚನೆ")**, ಸೋಮವಾರ, ಅಕ್ಟೋಬರ್ 19, 2026ರಂದು ಡಿಪಾಸಿಟರಿಗಳಾದ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ ನಿರ್ವಹಿಸುವ ಲಾಭಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರುಗಳಿದ್ದ ಹಾಗೂ ತಮ್ಮ ಇಮೇಲ್ ವಿಳಾಸವನ್ನು ಡಿಪಾಸಿಟರಿ ಪಾರ್ಟಿಸಿಪೆಂಟ್‌ಗಳು / ಕಂಪನಿ / ಕಂಪನಿಯ ನೋಂದಣಾಧಿಕಾರಿ ಮತ್ತು ಷೇರು ವರ್ಗಾವಣೆ ಏಜೆಂಟ್ ಬಳಿ ನೋಂದಾಯಿಸಿರುವ ಸದಸ್ಯರಿಗೆ ಗುರುವಾರ, ಅಕ್ಟೋಬರ್ 22, 2026ರಂದು ಎಲೆಕ್ಟ್ರಾನಿಕ್ ವಿಧಾನದಲ್ಲಿ ಕಳುಹಿಸಲಾಗಿದೆ.
2. ಸೋಮವಾರ, ಅಕ್ಟೋಬರ್ 19, 2026ರಂದು ("ಕಟ್-ಆಫ್ ದಿನಾಂಕ") ಸದಸ್ಯರಾಗಿರದ ವ್ಯಕ್ತಿಯು ಈ ಸೂಚನೆಯನ್ನು ಮಾಹಿತಿಗಾಗಿ ಮಾತ್ರ ಪರಿಗಣಿಸಬೇಕು. ಈ ಪೋಸ್ಟಲ್ ಬ್ಯಾಲೆಟ್‌ಗಾಗಿ ಪೋಸ್ಟಲ್ ಬ್ಯಾಲೆಟ್ ಫಾರ್ಮ್‌ಗಳು ಮತ್ತು ಮುಂಗಡ ಅಂಚೆ ಶುಲ್ಕ ಪಾವತಿಸಿದ ವ್ಯಾವಹಾರಿಕ ಲಕೋಟೆಗಳೊಂದಿಗೆ ಪೋಸ್ಟಲ್ ಬ್ಯಾಲೆಟ್ ಸೂಚನೆಯ ಮುದ್ರಿತ ಪ್ರತಿಗಳನ್ನು ಸದಸ್ಯರಿಗೆ ಕಳುಹಿಸಲಾಗುವುದಿಲ್ಲ. ಸದಸ್ಯರು ತಮ್ಮ ಸಮ್ಮತಿ ಅಥವಾ ಅಸಮ್ಮತಿಯನ್ನು ರಿಮೋಟ್ ಇ-ವೋಟಿಂಗ್ ವ್ಯವಸ್ಥೆಯ ಮೂಲಕ ಮಾತ್ರ ತಿಳಿಸಬೇಕು.
3. ಕಂಪನಿಯು ಇ-ವೋಟಿಂಗ್ ಸೌಲಭ್ಯವನ್ನು ಒದಗಿಸುವ ಉದ್ದೇಶಕ್ಕಾಗಿ ಎಂಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ (ಹಿಂದೆ ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) **("ಎಂಐಐಪಿಎಲ್")** ಸೇವೆಗಳನ್ನು ಪಡೆದುಕೊಂಡಿದೆ. ಕಟ್-ಆಫ್ ದಿನಾಂಕದಂದು ಷೇರುಗಳನ್ನು ಹೊಂದಿರುವ ಸದಸ್ಯರು ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸಲು ಅರ್ಹರಾಗಿರುತ್ತಾರೆ. ಇ-ವೋಟಿಂಗ್ ಸೌಲಭ್ಯವು ಶುಕ್ರವಾರ, ಅಕ್ಟೋಬರ್ 23, 2026ರಂದು ಬೆಳಿಗ್ಗೆ 09:00 ಗಂಟೆಯಿಂದ (ಐಎಸ್‌ಟಿ) ಶನಿವಾರ, ನವೆಂಬರ್ 21, 2026ರಂದು ಸಂಜೆ 05:00 ಗಂಟೆಯವರೆಗೆ (ಐಎಸ್‌ಟಿ) ಲಭ್ಯವಿರುತ್ತದೆ. ಶನಿವಾರ, ನವೆಂಬರ್ 21, 2026ರಂದು ಸಂಜೆ 05:00 ಗಂಟೆಯ (ಐಎಸ್‌ಟಿ) ನಂತರ ತಕ್ಷಣವೇ ಎಂಐಐಪಿಎಲ್ ಇ-ವೋಟಿಂಗ್ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸುತ್ತದೆ. ಸದಸ್ಯರು ನಿರ್ಣಯದ ಮೇಲೆ ಒಮ್ಮೆ ಮತ ಚಲಾಯಿಸಿದ ಬಳಿಕ, ಅದನ್ನು ನಂತರ ಬದಲಾಯಿಸಲು ಅವರಿಗೆ ಅವಕಾಶವಿರುವುದಿಲ್ಲ.
4. ಇ-ವೋಟಿಂಗ್‌ಗೆ ಸಂಬಂಧಿಸಿದ ವಿವರವಾದ ಸೂಚನೆಗಳನ್ನು ಈ ಸೂಚನೆಯ ಭಾಗವಾಗಿ ನೀಡಲಾಗಿದ್ದು, ಮತ ಚಲಾಯಿಸುವ ಮೊದಲು ಅವುಗಳನ್ನು ಎಚ್ಚರಿಕೆಯಿಂದ ಓದುವಂತೆ ಸದಸ್ಯರಿಗೆ ವಿನಂತಿಸಲಾಗಿದೆ. ವಿವರಣಾತ್ಮಕ ಹೇಳಿಕೆಯೊಂದಿಗೆ ಸೂಚನೆಯು ಕಂಪನಿಯ ವೆಬ್‌ಸೈಟ್ www.indiqube.com ನಲ್ಲಿ ಲಭ್ಯವಿದೆ. ಇವು ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್‌ಗಳಾದ ಕ್ರಮವಾಗಿ www.bseindia.com ಮತ್ತು www.nseindia.com ನಲ್ಲಿಯೂ ಹಾಗೂ ಎಂಐಐಪಿಎಲ್‌ನ ವೆಬ್‌ಸೈಟ್ https://instavote.linkintime.co.in/ ನಲ್ಲಿಯೂ ಲಭ್ಯವಿವೆ.
5. ಕಂಪನಿಯ ನಿರ್ದೇಶಕರ ಮಂಡಳಿಯು ಪೋಸ್ಟಲ್ ಬ್ಯಾಲೆಟ್ ಪ್ರಕ್ರಿಯೆಯನ್ನು ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಸಿಎಸ್ ವರ್ಷಾ ವಿ. ಶೆಣೈ (ಐಸಿಎಸ್‌ಐ ಸದಸ್ಯತ್ವ ಸಂ.: F9012, ಸಿಒಪಿ: 10499) ಅವರನ್ನು ಸ್ಕ್ರೂಟಿನೈಸರ್ ಆಗಿ ನೇಮಿಸಿದೆ.
6. ರಿಮೋಟ್ ಇ-ವೋಟಿಂಗ್ ಮೂಲಕ ನಡೆದ ಪೋಸ್ಟಲ್ ಬ್ಯಾಲೆಟ್‌ನ ಫಲಿತಾಂಶಗಳನ್ನು ರಿಮೋಟ್ ಇ-ವೋಟಿಂಗ್ ಅವಧಿ ಮುಕ್ತಾಯವಾದ ನಂತರ ಎರಡು ಕಾರ್ಯದಿನಗಳೊಳಗೆ ಪ್ರಕಟಿಸಲಾಗುತ್ತದೆ ಮತ್ತು ಕಂಪನಿಯ ಇಕ್ವಿಟಿ ಷೇರುಗಳು ಪಟ್ಟಿಗೊಂಡಿರುವ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ತಿಳಿಸಲಾಗುತ್ತದೆ. ಸ್ಕ್ರೂಟಿನೈಸರ್‌ರ ವರದಿಯೊಂದಿಗೆ ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್ www.indiqube.com ಮತ್ತು ಎಂಐಐಪಿಎಲ್‌ನ ವೆಬ್‌ಸೈಟ್ https://instavote.linkintime.co.in/ ನಲ್ಲಿಯೂ ಪ್ರಕಟಿಸಲಾಗುತ್ತದೆ.
7. ತಮ್ಮ ಇಮೇಲ್ ವಿಳಾಸವನ್ನು ಇನ್ನೂ ನೋಂದಾಯಿಸದ ಸದಸ್ಯರಿಗೆ, ಡಿಮೆಟೀರಿಯಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ ಅದನ್ನು ತಮ್ಮ ಸಂಬಂಧಿತ ಡಿಪಾಸಿಟರಿ ಪಾರ್ಟಿಸಿಪೆಂಟ್‌ಗಳ ಬಳಿ ನೋಂದಾಯಿಸಿಕೊಳ್ಳುವಂತೆ ವಿನಂತಿಸಲಾಗಿದೆ. ಕೆವೈಸಿ ವಿವರಗಳ ನವೀಕರಣಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿದ್ದಲ್ಲಿ, ಸದಸ್ಯರು ಕಂಪನಿಯ ನೋಂದಣಾಧಿಕಾರಿ ಮತ್ತು ವರ್ಗಾವಣೆ ಏಜೆಂಟ್ ಅನ್ನು investor.helpdesk@in.mpms.mufg.com ಮೂಲಕ ಸಂಪರ್ಕಿಸಬಹುದು. ಸೂಚನೆಯನ್ನು ಸ್ವೀಕರಿಸದ ಸದಸ್ಯರು ಅದರ ಪ್ರತಿಯನ್ನು ಪಡೆಯಲು cs.compliance@indiqube.com ಗೆ ಇಮೇಲ್ ಕಳುಹಿಸಬಹುದು.
8. ಡಿಪಾಸಿಟರಿಗಳ ಮೂಲಕ ಲಾಗಿನ್ ಮಾಡುವಾಗ ಯಾವುದೇ ತಾಂತ್ರಿಕ ಸಮಸ್ಯೆಗಳು ಎದುರಾದಲ್ಲಿ, ಸದಸ್ಯರು ಕೆಳಗೆ ನೀಡಿರುವಂತೆ ಸಂಬಂಧಿತ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು:

ಲಾಗಿನ್ ವಿಧ	ಸಹಾಯ ಕೇಂದ್ರದ ವಿವರಗಳು
ಎನ್‌ಎಸ್‌ಡಿಎಲ್‌ನಲ್ಲಿ ಡಿಮ್ಯಾಟ್ ರೂಪದಲ್ಲಿ ಪ್ರತಿಭೂತಿಗಳನ್ನು ಹೊಂದಿರುವ ವೈಯಕ್ತಿಕ ಸದಸ್ಯರು	ಲಾಗಿನ್ ಮಾಡುವಾಗ ಯಾವುದೇ ತಾಂತ್ರಿಕ ಸಮಸ್ಯೆ ಎದುರಿಸುವ ಸದಸ್ಯರು evoting@nsdl.co.in ಗೆ ವಿನಂತಿ ಕಳುಹಿಸುವ ಮೂಲಕ ಎನ್‌ಎಸ್‌ಡಿಎಲ್ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು ಅಥವಾ 022-48867000 ಸಂಖ್ಯೆಗೆ ಕರೆ ಮಾಡಬಹುದು
ಸಿಡಿಎಸ್‌ಎಲ್‌ನಲ್ಲಿ ಡಿಮ್ಯಾಟ್ ರೂಪದಲ್ಲಿ ಪ್ರತಿಭೂತಿಗಳನ್ನು ಹೊಂದಿರುವ ವೈಯಕ್ತಿಕ ಸದಸ್ಯರು	ಲಾಗಿನ್ ಮಾಡುವಾಗ ಯಾವುದೇ ತಾಂತ್ರಿಕ ಸಮಸ್ಯೆ ಎದುರಿಸುವ ಸದಸ್ಯರು helpdesk.evoting@cdslindia.com ಗೆ ವಿನಂತಿ ಕಳುಹಿಸುವ ಮೂಲಕ ಸಿಡಿಎಸ್‌ಎಲ್ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು ಅಥವಾ ಟೋಲ್ ಫ್ರೀ ಸಂ. 1800 22 55 33 ಮೂಲಕ ಸಂಪರ್ಕಿಸಬಹುದು
ಡಿಮ್ಯಾಟ್ ರೂಪದಲ್ಲಿ ಪ್ರತಿಭೂತಿಗಳನ್ನು ಹೊಂದಿರುವ ವೈಯಕ್ತಿಕೇತರ ಸದಸ್ಯರು:	ಡಿಮ್ಯಾಟ್ ರೂಪದಲ್ಲಿ ಪ್ರತಿಭೂತಿಗಳನ್ನು ಹೊಂದಿರುವ ಮತ್ತು ಲಾಗಿನ್ ಮಾಡುವಾಗ ಯಾವುದೇ ತಾಂತ್ರಿಕ ಸಮಸ್ಯೆ ಎದುರಿಸುವ ವೈಯಕ್ತಿಕೇತರ ಸದಸ್ಯರು enotices@in.mpms.mufg.com ಗೆ ವಿನಂತಿ ಕಳುಹಿಸುವ ಮೂಲಕ ಇನ್‌ಸ್ಟಾವೋಟ್ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು ಅಥವಾ ದೂರವಾಣಿ ಸಂಖ್ಯೆ 022 – 4918 6000 ಮೂಲಕ ಸಂಪರ್ಕಿಸಬಹುದು.

9. ಎಲೆಕ್ಟ್ರಾನಿಕ್ ವಿಧಾನದಲ್ಲಿ ಮತದಾನ ಮಾಡುವ ಸೌಲಭ್ಯಕ್ಕೆ ಸಂಬಂಧಿಸಿದ ದೂರುಗಳನ್ನು ಸದಸ್ಯರು ಶ್ರೀ ಭಾಸ್ಕರ್ ದುಬೆ, ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ, ಇಂಡಿಕ್ಯೂಬ್ ಸ್ಪೇಸಸ್ ಲಿಮಿಟೆಡ್ ಅವರಿಗೆ ಸಲ್ಲಿಸಬಹುದು. ವಿಳಾಸ: ಪ್ಲಾಟ್ # 53, ಕೇರಿಯರ್‌ನೆಟ್ ಕ್ಯಾಂಪಸ್, ಕರಿಯಮ್ಮನ ಅಗ್ರಹಾರ ರಸ್ತೆ, ದೇವರಬೀಸನಹಳ್ಳಿ, ಔಟರ್ ರಿಂಗ್ ರಸ್ತೆ, ಬೆಂಗಳೂರು 560103; ಇಮೇಲ್: cs.compliance@indiqube.com; ದೂರವಾಣಿ: +91 99000 92210.

ಇಂಡಿಕ್ಯೂಬ್ ಸ್ಪೇಸಸ್ ಲಿಮಿಟೆಡ್ ಪರವಾಗಿ

ಭಾಸ್ಕರ್ ದುಬೆ
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ
ಐಸಿಎಸ್‌ಐ ಸದಸ್ಯತ್ವ ಸಂ.: A33287

ಸ್ಥಳ: ಬೆಂಗಳೂರು, ಕರ್ನಾಟಕ
ದಿನಾಂಕ: ಅಕ್ಟೋಬರ್ 22, 2026

ವಿಧಾನಸೌಧ ಸ್ಫೋಟಿಸಿದಂತೆ ಎಐ ವಿಡಿಯೊ: ಆರೋಪಿ ಸೆರೆ

ಬೆಂಗಳೂರು: ವಿಧಾನಸೌಧದ ಕಟ್ಟಡದಲ್ಲಿ ಬಾಂಬ್ ಸ್ಫೋಟಗೊಂಡಂತೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಮೂಲಕ ವಿಡಿಯೋ ತಯಾರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದ ವ್ಯಕ್ತಿಯನ್ನು ಬೆಂಗಳೂರು ಪೊಲೀಸರು ಬಂಧಿಸಿದ್ದಾರೆ.





ಬಿಹಾರ ರಾಜ್ಯದ ಅರಾರಿಯಾ ಜಿಲ್ಲೆಯ ವಲಸೆ ಕಾರ್ಮಿಕ ಅಲಿ (25) ಬಂಧಿತ ಆರೋಪಿ. ಈತ ಕಳೆದ ಕೆಲವು ತಿಂಗಳುಗಳಿಂದ ಬೆಂಗಳೂರಿನಲ್ಲಿ ಪೈಪ್ ಫಿಟ್ಟರ್ ಆಗಿ ದಿನಗೂಲಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಅ.20ರಂದು ಇನ್ಸ್ಟಾಗ್ರಾಮ್ ಖಾತೆಯಲ್ಲಿ ಬಾಂಬ್‌ನಿಂದ ವಿಧಾನಸೌಧವನ್ನು ಸ್ಫೋಟಿಸಿದೆ ಎಂಬ ಅಡಿ ಬರಹದಲ್ಲಿ ವಿಡಿಯೊ ಅಪ್ಲೋಡ್ ಮಾಡಲಾಗಿತ್ತು. ದೃಶ್ಯಾವಳಿಯಲ್ಲಿ ಮೊದಲಿಗೆ ವಿಧಾನಸೌಧದ ಮುಂಭಾಗದ ರಸ್ತೆಯಲ್ಲಿ ನಿಂತು ಹೊರಭಾಗದ ನೈಜ ದೃಶ್ಯಗಳನ್ನು ತೋರಿಸಲಾಗಿತ್ತು. ನಂತರ ಎಐ ತಂತ್ರಜ್ಞಾನ ಬಳಸಿ ಕಟ್ಟಡದಲ್ಲಿ ಭಾರಿ ಸ್ಫೋಟ ಸಂಭವಿಸಿದಂತೆ ಸುಳ್ಳು ದೃಶ್ಯಾವಳಿಯನ್ನ ಸೃಷ್ಟಿಸಲಾಗಿತ್ತು. ಸಾಮಾಜಿಕ ಜಾಲತಾಣಗಳ ಮೇಲೆ ಕಣ್ಣಾವಲು ಕಾರ್ಯಾಚರಣೆ ಸಮಯದಲ್ಲಿ ಈ ವಿಡಿಯೊ ಪೊಲೀಸರ ಗಮನಕ್ಕೆ ಬಂದಿತ್ತು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ವಿಧಾನಸೌಧ ಠಾಣೆ ಪೊಲೀಸರು, ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 353(1)(ಅ) ಮತ್ತು 353(2)ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದರು. ವಿಡಿಯೊ ಪ್ರಕಟವಾದ ಖಾತೆಗೆ ಸಂಬಂಧಿಸಿದ ಸುಳಿವುಗಳನ್ನು ಆಧರಿಸಿ ಬೆಂಗಳೂರಿನಲ್ಲಿದ್ದ ಅಲಿಯನ್ನು ಬಂಧಿಸಲಾಗಿದೆ. ಕೃತ್ಯದ ಹಿಂದಿರುವ ಉದ್ದೇಶವೇನು, ವಿಡಿಯೊ ಸೃಷ್ಟಿಸುವುದರ ಹಿಂದೆ ಯಾರದ್ದಾದರೂ ಪಾತ್ರವಿದೆಯಾ? ಎಂಬುದನ್ನು ತಿಳಿಯಲು ತೀವ್ರ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಕ್ರಮ ಸಿಮ್ ಬಾಕ್ಸ್ ಜಾಲ ಪತ್ತೆ: ನಾಲ್ವರ ಸೆರೆ

ಬೆಂಗಳೂರು: ಕರ್ನಾಟಕ ಸೈಬರ್ ಕಮಾಂಡ್ ಪೊಲೀಸರು ಮತ್ತು ದೂರಸಂಪರ್ಕ ಇಲಾಖೆ ಜಂಟಿಯಾಗಿ ಕಾರ್ಯಾಚರಣೆ ನಡೆಸಿ, ಏರ್‌ಟೆಲ್ ಕಂಪನಿಯ ಸಿಮ್ ಕಾರ್ಡ್‌ಗಳನ್ನು ಅಕ್ರಮವಾಗಿ ಬಳಸಿಕೊಂಡು ನಡೆಸಿದ್ದ ಸಿಮ್ ಬಾಕ್ಸ್ ದಂಧೆ ಜಾಲ ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಅಷ್ಟೇ ಅಲ್ಲದೆ ಮಹಾರಾಷ್ಟ್ರದ ಗೊಂಡಿಯಾ ಜಿಲ್ಲೆಯ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

10 ಸಿಮ್ ಬಾಕ್ಸ್ ಪತ್ತೆ: ಬೆಂಗಳೂರಿನ ಕಾಡುಗೋಡಿ ಮತ್ತು ಪಟ್ಟಂದೂರು ಅಗ್ರಹಾರದ ಪ್ರದೇಶಗಳಲ್ಲಿ ಈ ಅಕ್ರಮ ಸಿಮ್ ಬಾಕ್ಸ್ ಜಾಲ ಕಾರ್ಯನಿರ್ವಹಿಸುತ್ತಿರುವುದು ಪತ್ತೆಯಾಗಿದೆ. ಕಾಡುಗೋಡಿಯ ಅಪಾರ್ಟ್‌ಮೆಂಟ್‌ನಲ್ಲಿ 192 ಸಿಮ್‌ಗಳ ಸಾಮರ್ಥ್ಯದ ಆರು ಸಿಮ್ ಬಾಕ್ಸ್‌ಗಳು ಪತ್ತೆಯಾಗಿವೆ. ಇನ್ನು ಪಟ್ಟಂದೂರು ಅಗ್ರಹಾರದಲ್ಲಿ ನಾಲ್ಕು ಸಿಮ್ ಬಾಕ್ಸ್‌ಗಳು ಹಾಗೂ 128 ಸಿಮ್‌ಗಳ ಸಾಮರ್ಥ್ಯದ ವ್ಯವಸ್ಥೆ ಪತ್ತೆಯಾಗಿದೆ. ಎರಡೂ ಸ್ಥಳಗಳಲ್ಲಿ ಒಟ್ಟು 10 ಸಿಮ್ ಬಾಕ್ಸ್‌ಗಳನ್ನು ಪತ್ತೆಯಾಗಿದ್ದು, ಈ ಜಾಲದ ಕಾರ್ಯಾಚರಣೆಗೆ ಏರ್‌ಟೆಲ್ ಕಂಪನಿಯ ಸಿಮ್ ಕಾರ್ಡ್‌ಗಳನ್ನು ಅನಧಿಕೃತವಾಗಿ ಬಳಸಲಾಗುತ್ತಿತ್ತು ಎಂಬ ಆರೋಪ ಕೇಳಿಬಂದಿದೆ. ಇನ್ನು ಈ ಸಿಮ್ ಬಾಕ್ಸ್ ಜಾಲಕ್ಕೆ ಡಿಜಿಟಲ್ ಅರೆಸ್ಟ್ ವಂಚನೆ, ಸೆಕ್ಸ್ಟಾರ್ಷನ್ ಹಾಗೂ ದೇಶಾದ್ಯಂತ ನಡೆಯುತ್ತಿದ್ದ ಸೈಬರ್ ಹಣಕಾಸು ವಂಚನೆಗಳ ಸಂಪರ್ಕ ಇರುವ ಶಂಕೆ ವ್ಯಕ್ತವಾಗಿದೆ. ಈ ಜಾಲದ ಮೂಲಕ ನೂರಾರು ಕೋಟಿ ರೂ ಮೌಲ್ಯದ ಹಣಕಾಸು ವಂಚನೆ ನಡೆದಿರುವ ಸಾಧ್ಯತೆಯ ಬಗ್ಗೆಯೂ ತನಿಖೆ ನಡೆಯುತ್ತಿದೆ. ತನಿಖೆ ವೇಳೆ ಮಹಾರಾಷ್ಟ್ರದ ತಿರೋಡಾದಲ್ಲಿ ಸಿಮ್ ಕಾರ್ಡ್‌ಗಳನ್ನು ಖರೀದಿಸಿ, ಅವುಗಳನ್ನು ಇ–ಸಿಮ್‌ಗಳಾಗಿ ಪರಿವರ್ತಿಸಿ ಪೂರೈಕೆ ಮಾಡಲಾಗುತ್ತಿತ್ತು ಎಂಬ ಮಾಹಿತಿ ತಿಳಿದುಬಂದಿದೆ.

ಮೊಬೈಲ್ ಕಳವು: ಬಂಧನ

ಬೆಂಗಳೂರು: ಯೂಟ್ಯೂಬ್ ವಿಡಿಯೊಗಳನ್ನು ನೋಡಿ ಮೊಬೈಲ್ ಕಳ್ಳತನ ಮಾಡುವುದನ್ನು ಕಲಿತಿದ್ದ ಖತರ್ನಾಕ್ ಕಳ್ಳನೊಬ್ಬನನ್ನು ಹೊಸಕೋಟೆ ಪೊಲೀಸರು ಬಂಧಿಸಿದ್ದಾರೆ. ಒಡಿಶಾ ಮೂಲದ 30 ವರ್ಷದ ಶುಭಂ ಸೇನಾಪತಿ ಎಂಬಾತ ಅ.12ರಂದು ದುರ್ಗಾ ಮೊಬೈಲ್ ಅಂಗಡಿಗೆ ಕನ್ನ ಹಾಕಿ ಲಕ್ಷಾಂತರ ರೂಪಾಯಿ ಮೌಲ್ಯದ ಮೊಬೈಲ್‌ಗಳನ್ನು ದೋಚಿದ್ದ. ಕಳ್ಳತನದ ಮೊದಲು ಅಂಗಡಿಯ ಮುಂದೆ ಯಾರ ಗಮನಕ್ಕೂ ಬರದಂತೆ ಟಾರ್ಪಲ್ ಕಟ್ಟಿ, ನಂತರ ರೋಲಿಂಗ್ ಶಟರ್ ಮುರಿದು ಒಳನುಗ್ಗಿದ್ದ. ಇದಕ್ಕಾಗಿ ಆನ್‌ಲೈನ್‌ನಲ್ಲಿ ಗ್ಯಾಸ್ ಕಟ್ಟರ್ ಅನ್ನು ಕೂಡ ಖರೀದಿಸಿದ್ದನು. ಅಂಗಡಿಯಿಂದ ಬರೋಬ್ಬರಿ 15 ಲಕ್ಷ ರು. ಮೌಲ್ಯದ ವಿವಿಧ ಬ್ರ್ಯಾಂಡ್‌ಗಳ ಮೊಬೈಲ್‌ಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದ. ಈ ಕಳ್ಳತನದ ಸಂಪೂರ್ಣ ದೃಶ್ಯಾವಳಿಗಳು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದವು. ಸಿಸಿಟಿವಿ ದೃಶ್ಯಾವಳಿಗಳನ್ನು ಆಧಾರಿಸಿ ತನಿಖೆ ಕೈಗೊಂಡ ಹೊಸಕೋಟೆ ಪೊಲೀಸರು ಕಳ್ಳತನ ಪ್ರಕರಣವನ್ನು ಭೇದಿಸಿ, ಆರೋಪಿ ಶುಭಂ ಸೇನಾಪತಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.